ಪಯಣಿಕರಿಗೆ



2

ಜ್ಞಾನ ಪ್ರಕಾಶ ಸರಣಿ, ಮಂಗಳೂರು 3.

ಪಯಣಕ್ಕಾಗಿ

ಎಡಿ—ಅಮ್ಮೆಂಬಳ ಮಠ

೧೯೫೮

ಅನುಕ್ರಮಣಿಕೆ

ಇದೇ ಬರೆಹಗಾರರಿಂದ ಕನ್ನಡದಲ್ಲಿ—

೧. ಕಿರಿಯ ನೈತಿಕ ಮಾರ್ಗ (ನೀತಿಬೋಧೆ)
೨. ಯೇಸುವಿನ ದುರಂತ ವಿಜಯ (ಪರಿಚಯ)
೩. ಮಹಾಮಾತೆ (ಜೀವನ ಕಥೆ)
೪. ಯೇಸುಕ್ರಿಸ್ತನ ಪುನರುತ್ಥಾನದ ಪರ್ವಕಾಲ (ವಿಚಾರ)
೫. ಕೇವಲ ಪರಿಚಯಕ್ಕಾಗಿ (ವಿಚಾರ)

* ಸಮಾಜ ಬಾಂಧವರು (ಜೀವನ ಪರಿಚಯಗಳು)
* ಕ್ರೈಸ್ತ ತತ್ವದರ್ಶನ (ವಿಚಾರ)
* ಬೈಬಲಿನ ಬಣ್ಣ (ವಿಚಾರ)
* ಕ್ರೈಸ್ತ ದಾಂಪತ್ಯ ತತ್ವ (ವಿಚಾರ)
* ಯೋಹಾನ (ಕಾವ್ಯ).

Permissu Superiorum

Printed at the Codialbail Press, Mangalore, 1958.

ಪ ಯ ಣ ಕ್ಕಾಗಿ

ಬಹುದೂರದ ಪಯಣವೊಂದನ್ನು ನಾವು ಮಾಡಬಯಸುವೆವಾದರೆ ಮೊದಲನೆಯ ಕಾರ್ಯವಾಗಿ ದಾರಿಯನ್ನು ತಿಳಿದುಕೊಳ್ಳುವೆವು. ಆ ಪಯಣದಲ್ಲಿರುವ ಎಡರು-ತೊಡರುಗಳನ್ನೂ ಪರ್ವತ-ಮರುಭೂಮಿಗಳ ಇರವನ್ನೂ ತಿಳಿದುಕೊಳ್ಳುವೆವು. ಯುಕ್ತಸಿದ್ಧತೆಗಳನ್ನು ಮಾಡದೆ ನಾವು ಪಯಣವನ್ನು ಆರಂಭಿಸಲಾರೆವು. ಪಯಣದಲ್ಲಿ ಬಂದ ಆತಂಕಗಳನ್ನು ಆಯಾ ಸಂದರ್ಭಗಳಲ್ಲಿ ವಿವೇಚಿಸಿ, ನಿವಾರಿಸಿಕೊಂಡು ಮುಂದೆ ಹೋಗುವ ಧಾರ್ಷ್ಟ್ಯವು ನಮಗಿರದು. ಆದರೆ ಕಾಲವಶಾತ್ ಬಂದ ಆತಂಕಗಳನ್ನು ವಿವೇಚಿಸಿ ಯುಕ್ತ ರೀತಿಯಲ್ಲಿ ಪರಿಹಾರವನ್ನು ನೀಡಿ ಮುಂದುವರಿಸುವ ಧೈರ್ಯವೇನೋ ನಮ್ಮಲ್ಲಿರಬೇಕಾದುದು ಅನಿವಾರ್ಯ. ಹಾಗಿದ್ದರೂ ಇರಬಹುದಾದ ಆತಂಕಗಳನ್ನು ನಿವಾರಿಸಲೋಸುಗ ಮೊದಲೇ ಸಿದ್ಧತೆಯನ್ನು ನಾವು ಮಾಡುವೆವು. ಸಹಾಯವಾಗಿ, ಅಂತಹ ಪಯಣವನ್ನು ಮಾಡಿ ಸ್ವಾನುಭವವನ್ನು ಪಡೆದವರನ್ನು ನಾವು ವಿಚಾರಿಸುವೆವು.

ಲೋಕದಲ್ಲಿ ಸೌಂದರ್ಯಕ್ಕೆ ಹೆಸರಾದ ಎಷ್ಟೋ ಊರುಗಳಿವೆ; ಸ್ಥಳಗಳಿವೆ. ಅವುಗಳಲ್ಲಿ ಸಂಚರಿಸಿ, ಯುಕ್ತ ಅನುಭವವನ್ನು ಪಡೆಯಲು ಎಷ್ಟೋ ಜನರು ಸಾವಿರಾರು ರೂಪಾಯಿ ವೆಚ್ಚಮಾಡುವರು. ಆದರೆ ಅವರು ತಾವಾಗಿಯೇ ಆ ಪ್ರದೇಶಗಳನ್ನು ನೋಡಲರಿಯರು. ಸರಿಯಾದ ವಿವರಗಳಿರುವ ಪುಸ್ತಕಗಳನ್ನೂ ಯುಕ್ತ ಅನುಭವವಿರುವ ವ್ಯಕ್ತಿಗಳನ್ನೂ ಅವರು ಮಾರ್ಗದರ್ಶನಕ್ಕಾಗಿ ಆರಿಸಿಕೊಳ್ಳುವರು. ಮಾರ್ಗದರ್ಶಕರಲ್ಲಿ ಅನೇಕರು ತಾವು ಮುಂದೆ ಬಂದು ತಮ್ಮನ್ನು ಆರಿಸಿಕೊಳ್ಳುವಂತೆ ನಮ್ಮನ್ನು ಕೇಳುವರು. ಆದರೆ ಎಲ್ಲರನ್ನೂ ನಾವು ಆರಿಸಿಕೊಳ್ಳಲಾರೆವು. ನಮಗೆ ಯುಕ್ತವೆನಿಸಿದ ಮಾರ್ಗದರ್ಶಕನನ್ನು ನಾವು ಪರೀಕ್ಷಿಸಿ ಆರಿಸಿಕೊಳ್ಳಬೇಕಾಗಿದೆ.

ಆತನು ಆ ಪಯಣವನ್ನು ಎಷ್ಟುಸಲ-ಯಾರ ಪರವಾಗಿ ಗೈದಿರುವನು? ಅವನೊಡನಿರುವ ಪ್ರಮಾಣ ಪತ್ರಗಳು ಯಾವುವು? ಮೊದಲಾದ ಪ್ರಶ್ನೆಗಳಿಗೆ ಯುಕ್ತ ಉತ್ತರವನ್ನು ಆತನು ಕೊಡಲು ಸಮರ್ಥನಿರಬೇಕು. ನಮಗೆ ತೃಪ್ತಿಯಾಗುವ ಹಾಗೆ ಅವನು ಇಲ್ಲದಿದ್ದರೆ ನಾವು ಇನ್ನೊಬ್ಬನನ್ನು

ನೋಡಿ ಕೊಳ್ಳುವೆವು. ಆ ಮಾರ್ಗದರ್ಶಕನು ಎಷ್ಟು ವಿಶ್ವಾಸಪಾತ್ರನೋ ಅಷ್ಟು ಹೆಚ್ಚು ನಾವು ತೃಪ್ತರಾಗುವೆವು. ಏಕೆಂದರೆ ಪಯಣದ ಕಾಲದಲ್ಲಿ ನಮ್ಮ ಜೀವನ-ಮರಣಗಳೆರಡೂ ಆ ಮಾರ್ಗದರ್ಶಕನ ಕೈವಾಡದಲ್ಲಿರುವವು. ಪಯಣವು ನಿಶ್ಚಿಂತೆಯಿಂದ ಸಾಗಿಸುವುದು ನಮ್ಮ ಗುರಿ.

ನಮ್ಮ ಜೀವನವೂ ಒಂದು ಪಯಣವಾಗಿದೆ. ಪ್ರತಿಯೊಬ್ಬನ ಜೀವನದಲ್ಲಿಯೂ ಅದು ಅತ್ಯಂತ ದೀರ್ಘ ಪ್ರಯಾಣವಾಗಿದೆ. ಜನನದಲ್ಲಿ ಆರಂಭವಾಗಿ ಮರಣದಲ್ಲಿ ಕೊನೆಗೊಳ್ಳುವುದು ಈ ಪ್ರಯಾಣವು. ನಮ್ಮ ಈ ಸಂಸಾರಯಾತ್ರೆಯಲ್ಲಿ ಜೀವನನೌಕೆಯು ಸರಿದಾರಿತಪ್ಪದಂತೆ, ನಿಶ್ಚಿತ ರೇವನ್ನು ಸೇರುವಂತೆ ದಿವ್ಯತಾರೆಯೊಂದು ನಮಗೆ ಬೇಕು; ಮಾರ್ಗದರ್ಶಕನೊಬ್ಬನು ಇರಲೇಬೇಕು. ಆ ಮಾರ್ಗದರ್ಶನಕ್ಕಾಗಿ ಮುಂದೆ ಬಂದ ಎಲ್ಲರನ್ನೂ ನಾವು ಆರಿಸುವಂತಿಲ್ಲ. ನಮ್ಮ ನಿಶ್ಚಿತ ಗುರಿಯನ್ನು ಮುಟ್ಟಿಸಲು ಅವರು ಹಿತರಾಗಿರಬೇಕು. ಯುಕ್ತ ಪರೀಕ್ಷೆಗಳಿಂದ ನಾವು ವಿಶ್ವಾಸಪಾತ್ರನಾದ ಮಾರ್ಗದರ್ಶಕನನ್ನು ಆರಿಸಿಕೊಳ್ಳಬೇಕು. ಸರಿಯಾದ ಮಾರ್ಗದರ್ಶಕನ ಅಭಾವದಿಂದ, ಹಲವು ಸಲ ನಮ್ಮ ಲೋಪ-ದೋಷಗಳಿಂದ ನಿಶ್ಚಿತ ಗುರಿಯಾದ ಮೋಕ್ಷದಲ್ಲಿರಬೇಕಾದ ನಮ್ಮ ಆಧ್ಯಾತ್ಮಿಕ ಆತ್ಮವು ತದ್ವಿರುದ್ಧವಾದ ನರಕದಲ್ಲಿರಬೇಕಾಗಿ ಬರಬಹುದು.

ಆಧ್ಯಾತ್ಮಿಕ ಜೀವನದ ಮಾರ್ಗದರ್ಶಕರಲ್ಲಿ ಯೇಸುಕ್ರಿಸ್ತನ ಸ್ಥಾನವನ್ನು ತಿಳಿಸುವುದೇ ಈ ಕೈ ಹೊತ್ತಗೆಯ ಗುರಿ.

ಯೇಸುಕ್ರಿಸ್ತ

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ದೈವಿಕ ಪುರುಷನಾಗಿ ಹುಟ್ಟಿ, ಬಳೆದು, ದಿವ್ಯಸಂದೇಶವೊಂದನ್ನು ಬಿತ್ತಿ ಸತ್ಯದ ಸ್ಥಿರತೆಗಾಗಿ ಮರಣವನ್ನಪ್ಪಿದ ಯೇಸುಕ್ರಿಸ್ತನ ಜೀವನ ಪರಿಚಯವು ನಮಗಿದೆ. ಆದರೆ ಸಮಸ್ತ ಮಾರ್ಗದರ್ಶಕರಲ್ಲಿ ಆತನು ವಿಶಿಷ್ಠವಾದ ಸ್ಥಾನವೊಂದನ್ನು ಪಡೆಯುವನು. ಆ ವಿಶಿಷ್ಟಸ್ಥಾನದ ಪರಿಣಾಮವಾಗಿ ಯೇಸುಕ್ರಿಸ್ತನು ಸಮಸ್ತ ಆಧ್ಯಾತ್ಮಿಕ ಮಾರ್ಗದರ್ಶಕರಲ್ಲಿ ಅಗ್ರಸ್ಥಾನವನ್ನು ಪಡೆಯುವನು.

ಜಗತ್ತಿನ ಯಾವ ಮತಸ್ಥಾಪಕನೂ ಉಪಯೋಗಿಸದ ವಾಗ್ಧಾರೆಯೊಂದನ್ನು ಯೇಸುಕ್ರಿಸ್ತನು ಬಳಸಿರುವನು. ಏನಾದರೂ ಸಂದಿಗ್ಧ

ವಿಷಯದಲ್ಲಿ ವಿವರಣೆಯನ್ನೀಯುವಾಗ ಆತನು "ನಾನು ಹೇಳುತ್ತೇನೆ" ಮುಂತಾದ ಮಾತುಗಳಿಂದ ತನ್ನ ಸ್ಥಾನವನ್ನೂ ಉದ್ದೇಶವನ್ನೂ ವಿಶದಗೊಳಿಸಿರುವನು.

"ನೀವು ನಿಮ್ಮ ನೆರೆಯವರನ್ನು ಪ್ರೀತಿಸಬೇಕು ಮತ್ತು ವೈರಿಗಳನ್ನು ದ್ವೇಷಿಸಬೇಕು, ಎಂದು ಹೇಳಿರುವುದನ್ನು ಕೇಳಿರುವಿರಿ; ಆದರೆ, ನಿಮ್ಮ ವೈರಿಗಳನ್ನು ಪ್ರೀತಿಸಿರಿ, ನಿಮ್ಮನ್ನು ದ್ವೇಷಿಸುವವರಿಗೆ ಹಿತವನ್ನು ಮಾಡಿರಿ; ನಿಮ್ಮನ್ನು ಹಿಂಸಿಸುವವರಿಗೂ ದುಮ್ಮಾನಿಸುವವರಿಗೂ ಪ್ರಾರ್ಥಿಸಿರಿ, ಎಂದು ನಾನು ಹೇಳುತ್ತೇನೆ." (ಮಾ. V. 43, 44.)

"ವ್ಯಭಿಚಾರವನ್ನೆಸಗಬೇಡ, ಎಂದು ಹಿಂದಿನವರಿಗೆ ಹೇಳಿರುವದನ್ನು ನೀವು ಕೇಳಿರುವಿರಿ. ಆದರೆ ಯಾವಾತನು ಕಾಮದಿಂದ ಸ್ತ್ರೀಯನ್ನು ಕಾಣುವನೋ ಆತನು ತನ್ನ ಹೃದಯದಲ್ಲಿ ಅದಾಗಲೇ ವ್ಯಭಿಚಾರವನ್ನು ಗೈದಿರುವನೆಂದು ನಾನು ಹೇಳುತ್ತೇನೆ." (ಮಾ. V. 28)

ಧಾರ್ಮಿಕ ವಿಚಾರಗಳಲ್ಲಿ ರೂಢಿಯಿಂದ ಬಂದ ರೀತಿಗಳನ್ನು ತನ್ನೊಂದು ಅಧಿಕಾರವಾಣಿಯಿಂದ ನವೀನಾರ್ಥದಲ್ಲಿ ರೂಪಿಸಬೇಕಾದರೆ ದೇವರೊಬ್ಬನಿಂದ ಮಾತ್ರ ಸಾಧ್ಯ. ದೇವರಿಗಿಂತ ಮಿಗಿಲಾದ ಅಧಿಕಾರವಾಣಿಯು ಇತರರಿಗೆ ಅಲಭ್ಯವಾಗಿದೆ. ಆದುದರಿಂದಲೇ ಯೇಸುವು ತನಗೆ ಆ ಅಧಿಕಾರವೂ ಇದೆ ಎಂದು ಮುಕ್ತಕಂಠದಿಂದ ವಿಶದಗೊಳಿಸಿರುವನು: ಯಾವ ಮತಸ್ಥಾಪಕನೂ ತಾನು ದೇವರೆಂದು ಎಲ್ಲಿಯೂ ಹೇಳಿಕೊಳ್ಳಲಿಲ್ಲ. ಯೇಸುಕ್ರಿಸ್ತನು ಅನೇಕ ಸಂದರ್ಭಗಳಲ್ಲಿ ಅದನ್ನು ಉದ್ಘೋಷಪೂರ್ವಕವಾಗಿಯೇ ಸಾರಿರುವನು.

"ಮಾನವ ಪುತ್ರನು ಸಬ್ಬತಿನ ಸ್ವಾಮಿಯೂ ಆಗಿರುವನು"

(ಸಬ್ಬತ್—ಶನಿವಾರ; ಆಗಿನವರಿಗೆ ಪವಿತ್ರ ದಿನ. ಅಂದು ದೈಹಿಕ ಕಾರ್ಯವು ನಿಷಿದ್ಧಿಸಲಾಗಿತ್ತು).

"ನಾನು ಜೀವವೂ ಪುನರುತ್ಥಾನವೂ ಆಗಿರುವೆನು."

"ನಾನೂ ಪಿತನೂ ಒಂದೇ ಆಗಿರುವೆವು." (ಯೋ X 30)

"ನಾನು ಲೋಕದ ಪ್ರಕಾಶವಾಗಿರುವೆನು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ಎಂದಿಗೂ ನಡೆಯನು; ಆದರೆ ಜೀವನದ ಪ್ರಕಾಶವು ಅವನಿಗಿರುವುದು. (ಯೋ VIII, 12)

"ನಾನು ಭಗವಂತನ ಪುತ್ರನಾಗಿರುವೆನು." (ಯೋಹಾನ X : 36) ಹೀಗೆ ತಾನು ಹೇಳಿಕೊಂಡ ಭಗವತ್-ಸಂಭವವನ್ನು ಸಮರ್ಥಿಸುವುದಕ್ಕಾಗಿ ಯೇಸುವು ಬಹುಬಗೆಯ ಪವಾಡಗಳನ್ನು ಮಾಡಿದನು:—

ತನ್ನ ಅಧಿಕಾರವಾಣಿಯೊಂದರಿಂದಲೇ ಪ್ರಕ್ಷುಬ್ಧಗೊಂಡ ಬಿರುಗಾಳಿಯನ್ನು ಸಾಂತ್ವನಗೊಳಿಸಿ ಭಯಗೊಂಡ ತನ್ನ ಶಿಷ್ಯರನ್ನು ಸ್ಥಿರಗೊಳಿಸಿದನು. ಕೇವಲ ಕೆಲವು ರೊಟ್ಟಿಗಳಿಂದಲೇ ಐದು ಸಾವಿರಕ್ಕಿಂತಲೂ ಮಿಕ್ಕಿದ ಜನತೆಯನ್ನು ಪೂರ್ಣ ತೃಪ್ತಿಗೊಳಿಸಿದನು. ರೋಗಿಗಳನ್ನೂ ಅಂಗಹೀನರನ್ನೂ ಅಂಗವಿಕಲರನ್ನೂ ಯಾವುದೊಂದು ಬಗೆಯ ಔಷಧವನ್ನೂ ಪ್ರಯೋಗಿಸದೆ ಸರಿಗೊಳಿಸಿದನು. ವಿವಿಧ ರೀತಿಯಲ್ಲಿ ವ್ಯಕ್ತಿಗಳನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಅವರಲ್ಲಿ ಆವಾಹನೆಗೊಂಡ ದುಷ್ಟ ಶಕ್ತಿಗಳನ್ನೂ ಪಿಶಾಚಿಗಳನ್ನೂ ತೊಲಗಿಸಿದನು. ತನಗೆ ಬರಲಿದ್ದ ಯಾತನಾಮಯ ಮರಣವನ್ನೂ ಮತ್ತದರ ಪೂರ್ವದ ಅನೇಕಾನೇಕ ಕಷ್ಟಗಳನ್ನೂ ಎಷ್ಟೋ ದಿನಗಳ ಮುಂಚಿತವಾಗಿಯೇ ಬಹಿರಂಗಗೊಳಿಸಿದನು. ಮಾತ್ರವಲ್ಲ ಕನಸುಗಳಲ್ಲಿಯೂ ಊಹಿಸದ ಯೆರೂಸಲೇಮಿನ ಪತನ, ಅಲ್ಲಿಯ ದೇವಾಲಯದ ವಿನಾಶ ಮೊದಲಾದ ಹಲವು ವಿಷಯಗಳು ನಡೆಯುವ ಮೊದಲೇ ಸ್ವಶಕ್ತಿಯಿಂದಲೇ ಪ್ರಕಟಿಸಿದನು. ಇಷ್ಟೇ ಅಲ್ಲದೆ ಭಗವಂತನೊಬ್ಬನಿಂದಲೇ ಮಾಡಲು ಸಾಧ್ಯವಿರುವ, ಸತ್ತವರನ್ನು ಪುನರ್ಜೀವಗೊಳಿಸುವ ಕಾರ್ಯವನ್ನು ಹಲವು ಸಲ ಮಾಡಿರುವನು. ಇವೆಲ್ಲವೂ ಸಾಲದೆಂಬಂತೆ ತಾನು ಮರಣದ ಪೂರ್ವಭಾವಿಯಾಗಿಯೇ ತಿಳಿಸಿದಂತೆ, ಸತ್ತ ಮೂರನೆಯದಿನ, ಸಮಾಧಿಯಿಂದ ಪುನರುತ್ಥಾನಗೊಂಡು ತನ್ನ ದೈವತ್ವದ ಪರಿಪೂರ್ಣ ಸಮರ್ಥನೆಯನ್ನು ಮಾಡಿದನು. ಈ ಪುನರುತ್ಥಾನದ ಅನಂತರದ ನಾಲ್ವತ್ತು ದಿನಗಳ ತನಕ ತನ್ನ ಶಿಷ್ಯರ ಮಧ್ಯದಲ್ಲಿದ್ದು ತಾನು ಮಾಡಲಿದ್ದ ಕಾರ್ಯಗಳನ್ನು ಪೂರ್ಣಗೊಳಿಸಿದನು.

ಯೇಸುಕ್ರಿಸ್ತನನ್ನು ವಧಿಸುವುದಕ್ಕಾಗಿ ಆತನ ವೈರಿಗಳು ಆತನ ಶಿಷ್ಯರಲ್ಲೊಬ್ಬನಾದ ಯೂದಾಸನೆಂಬವನಿಗೆ ಕೈ ಬೆಚ್ಚಗೆ ಮಾಡುವ ಆಶಯದಿಂದ ಯೇಸುವನ್ನು ರಾತ್ರಿಕಾಲದಲ್ಲಿ ಬಂಧಿಸಿದರು. ಮರಣದಂಡನೆಗೆ ಯುಕ್ತವಾದ ಅಪರಾಧಮಂಡನಕ್ಕಾಗಿ ಹಿರಿಯ ಯಾಜಕ ಕಾಯಿಫಾಸನ ಅಧ್ಯಕ್ಷತೆಯಲ್ಲಿ ಸಭೆಯೊಂದು ಕೂಡಿತ್ತು. ಹಲವು ರೀತಿಗಳಲ್ಲಿ ವಿಚಾರಿಸಿ

ದರೂ ಯೇಸುವಿನಲ್ಲಿ ದೋಷಾರೋಪಣೆ ಮಾಡಲಾಗಲಿಲ್ಲ. ಆಗ ಕಾಯ್‌ಫಾಸನು "ಭಗವಂತ ಪುತ್ರನಾದ ಕ್ರಿಸ್ತನು ನೀನಾಗಿರುವೆಯೋ ಎಂದು ಜೀವಂತ ದೇವರ ಆಣೆಯಲ್ಲಿ ನಿನ್ನನ್ನು ನಾನು ಕೇಳುತ್ತೇನೆ" ಎಂದು ಪ್ರಶ್ನೆಯಿತ್ತನು. ಅದಕ್ಕುತ್ತರವಾಗಿ ಯೇಸುವು "ನಾನು ಹೇಳಿದಾಗ ನೀವು ನಂಬಲಾರಿರಿ; ನಾನು ಪ್ರಶ್ನಿಸಿದಾಗ ನೀವು ಉತ್ತರಿಸಲಾರಿರಿ; ಹೇಗಿದ್ದರೂ ಇನ್ನು ಮುಂದಕ್ಕೆ ಮಾನವಪುತ್ರನು ಭಗವಂತ ಸಾನಿಧ್ಯದ ಬಲಗಡೆಯಲ್ಲಿ ಕುಳ್ಳಿರುವನು" ಎಂದನು. "ಹಾಗಾದರೆ ನೀನು ಭಗವಂತನ ಪುತ್ರನೋ" ಎಂದು ಅವನು ಪುನಃ ಪ್ರಶ್ನಿಸಿದನು. ಯೇಸುವು ಉತ್ತರವಾಗಿ, "ನೀವೇ ಹೇಳುವಂತೆ ನಾನಾಗಿರುವೆನು . . . ." ಎಂದನು. "ಆತನು ದೇವನಿಂದೆ ಯನ್ನು ಗೈದಿರುವನು . . . . ಆತನಿಗೆ ಮರಣವು ಯೋಗ್ಯವಾಗಿದೆ" ಹೀಗೆ ಯೇಸುಕ್ರಿಸ್ತನು ತಾನು ದೇವರೆಂದು ಹೇಳಿಕೊಂಡ ಕಾರಣಕ್ಕಾಗಿ ಮರಣಕ್ಕೆ ಗುರಿಯಾದನು.

ಕ್ರಿಸ್ತನ ಕಾರ್ಯ

ಯೇಸುಕ್ರಿಸ್ತನು ಯೆಹೂದ್ಯ ವಂಶದಲ್ಲಿ ಹುಟ್ಟಿದನು. ಯೆಹೂದ್ಯರು ಭಗವಂತನನ್ನು ಯೆಹೋವಾ ಎಂದು ಕರೆಯುವರು. ರಕ್ಷಕನೆಂದು ಅದರ ಅರ್ಥ. ಯೇಸುವಿನ ಹೆಸರಿನ ಮೂಲರೂಪ ಯೆಶುವಾ—ಅದು ಯೆಹೋವಾದ ರೂಪಾಂತರ. ಆದುದರಿಂದ ಯೇಸುವೆಂದರೆ ರಕ್ಷಕನೆಂದಾಯಿತು. ಕ್ರಿಸ್ತನೆಂದರೆ ಅಭ್ಯಂಗಿಸಲ್ಪಟ್ಟವನೆಂದರ್ಥ. ಯೆಹೂದ್ಯರಲ್ಲಿ ಪ್ರವಾದಿಗಳನ್ನೂ ಯಾಜಕರನ್ನೂ ಅರಸರನ್ನೂ ಪವಿತ್ರ ತೈಲ ವಿಲೇಪನದಿಂದ ಅಭಿಷಿಕ್ತರನ್ನಾಗಿ ಮಾಡುವ ಕ್ರಮ. ಯೇಸುವು ಆಧ್ಯಾತ್ಮಿಕ ದೃಷ್ಟಿಯಲ್ಲಿ ಅತ್ಯಂತ ಶ್ರೇಷ್ಠ ಯಾಜಕನೂ, ಪ್ರಪ್ರಥಮ ಪ್ರವಾದಿಯೂ, ಸಕಲ ವಿಶ್ವದ ಚಕ್ರವರ್ತಿಯೂ ಆಗಿರುವನು. ಹೀಗಾಗಿ ಕ್ರಿಸ್ತನೆಂಬ ಅನ್ವರ್ಥನಾಮವು ಆತನಿಗೆ ಯುಕ್ತವಾಗಿದೆ.

ಮಾನವ ಜನತೆಗಾಗಿ ಯೇಸುವಿನ ಮುಖ್ಯ ಕಾರ್ಯವು ಕ್ರಿಸ್ತಮತ — ಕ್ರೈಸ್ತಮತದ ಸ್ಥಾಪನೆಯೇ ಆಗಿದೆಯೆಂದು ಇತಿಹಾಸದಿಂದ ನಾವು ತಿಳಿದುಕೊಂಡಿರುವೆವು. ಯೇಸುವೇ "ಅವರ (ಜನರ)ಲ್ಲಿ ಜೀವವಿರುವಂತೆಯೂ ಅದೂ ಸಮೃದ್ಧಿಯಾಗಿರಲೆಂದೂ ನಾನು ಬಂದೆನು" (ಯೋ X, 10)

ಎಂದೂ ತನ್ನ ಕಾರ್ಯವನ್ನು ಪ್ರಕಟಪಡಿಸಿರುವನು. ಆತನು ಸೂಚಿಸಿದ 'ಜೀವ'ವು ಮಾತಾಪಿತೃಗಳ ಮೂಲಕ ನಾವು ಪಡೆದ ಜೀವವಾಗಿರಲಾರದು. ಯಾವುದನ್ನು ಮಾತಾಪಿತೃಗಳ ಮೂಲಕ ಭಗವಂತನು ನಮಗಿತ್ತಿರುವನೋ ಅದನ್ನು ನೀಡುವುದಕ್ಕಾಗಿ ಯೇಸುವು ಬಂದವನೆಂದರೆ ಸಮಂಜಸವಾಗದು.

ಮಾನವನು ಸಕಲಜೀವಿಗಳಲ್ಲಿ ಸರ್ವಶ್ರೇಷ್ಠನು. ಆತನಲ್ಲಿ ಐಹಿಕ ಸುಖಗಳೆಷ್ಟಿದ್ದರೂ ಇನ್ನೂ ತೃಪ್ತಿಯಿಲ್ಲ. ಆತನ ಹೃದಯಾಂತರಾಳದಲ್ಲಿ ತೃಪ್ತಿಯನ್ನೀಯುವ ಅದೊಂದು ವಿಶೇಷತ್ವದ ಆಸೆಯು ಹುದುಗಿದೆ. ಆ ಆಧ್ಯಾತ್ಮಿಕ ವಿಶೇಷತ್ವವು ಮಾನವ ಜೀವಿಗೆ ಮೊದಲೊಮ್ಮೆ ಇರದೆ ಹೋಗುತಿದ್ದರೆ ಈಗ ಅದನ್ನು ಹೃದಯವು ಬಯಸುತ್ತಿರಲಿಲ್ಲ. ಭಗವಂತ ನಿಂದ ನೀಡಲ್ಪಟ್ಟ ಆ ಶ್ರೇಷ್ಠತ್ವವನ್ನು ಮಾನವ ವ್ಯಕ್ತಿಯು ತನ್ನ ಕುಲಕ್ಕಾಗಿ ಕಳೆದುಕೊಂಡಿರಲು, ಅದಾವುದೋ ರೀತಿಯಲ್ಲಿ ಆತನು ಬಹು ಹಿಂದೆ ಪತನಗೊಂಡಿರಬೇಕು. ಆ ಪತನದ ಮುನ್ನ ಮಾನವನು ತನ್ನ ಸಹಜ ಸ್ವಭಾವಕ್ಕೆ ಮೀರಿದ ಹಲವು ಶ್ರೇಷ್ಠತೆಗಳಿಂದ ಕೂಡಿದವನಾಗಿ ಭಗವಂತನ ಸಾಮೀಪ್ಯದಲ್ಲಿರಬೇಕು. ಕೇವಲ ಮೃತ್ಪಿಂಡ ಮಾನವನು ದಿವ್ಯತೆಗಳಿಂದ ಅಲಂಕರಿಸಲ್ಪಟ್ಟು ಭಗವಂತನ ಸಾದೃಶ್ಯವನ್ನು—ಸಮಾನತೆಯಲ್ಲ— ಪಡೆದಿರಬೇಕು.

ಕ್ರೈಸ್ತ ಪವಿತ್ರ ಗ್ರಂಥವಾದ ಬೈಬಲಿನಲ್ಲಿ ಮಾನವನ ಪತನದ ಕುರಿತು ವಿವರಗಳಿವೆ. ಆ ತನ್ನ ಪತನದಿಂದ ಮಾನವನು ತನ್ನ ಕುಲಕ್ಕಾಗಿ, ಸಹಜ ಸ್ವಭಾವಕ್ಕೆ ಮಿಗಿಲಾದ ಆ ದಿವ್ಯತೆಗಳನ್ನು ಕಳೆದುಕೊಂಡನು. ಕೇವಲ ಸೃಷ್ಟಿಯಾದ ಮಾನವನ ಅಪರಾಧಮಯ ಪತನದಿಂದ ಕರ್ತನಾದ ಭಗವಂತನಿಗೆ ಯುಕ್ತ ಪರಿಹಾರವನ್ನು ನೀಡಲು, ಕಳೆದು ಹೋದ ಸ್ವಭಾವೋನ್ನತ ದಿವ್ಯತೆಗಳನ್ನೂ ಅವುಗಳೊಡನೆ ಇತರ ಸಹ-ವರಗಳನ್ನೂ ಪುನಃ ಮಾನವಕುಲಕ್ಕೆ ದೊರಕುವಂತೆ, ಯುಕ್ತ ಪವಿತ್ರೀಕರಣವನ್ನು ಮಾಡಲು, ಆ ಕಳೆದು ಹೋದ 'ಜೀವ'ವು ಪುನಃ ಬರುವಂತೆ ಗೈಯಲು ಭಗವತ್-ಪುರುಷನೇ ಯುಕ್ತ ಕಾರ್ಯವನ್ನು ಮಾಡಬೇಕಾಯಿತು. ಆ ಭಗವತ್-ಪುರುಷನೇ ಯೇಸುಕ್ರಿಸ್ತನು. ಆದುದರಿಂದ ಯೇಸುಕ್ರಿಸ್ತನು ನಮ್ಮ ಸಹಜ ಸ್ವಭಾವಕ್ಕೆ ಮಿಗಿಲಾದ, ದೈವಿಕ ಜೀವವನ್ನೂ ಅದರೊಡನೆ ಇತರ ವರಗಳನ್ನೂ ಮನುಷ್ಯಕುಲಕ್ಕೆ ಪುನಃ ಒದಗಿಸಿಕೊಟ್ಟನು.

ಹೀಗೆ ಯೇಸುಕ್ರಿಸ್ತನು ದ್ವಿವಿಧ ಕಾರ್ಯವನ್ನು ಮಾಡಲು ಬಂದವನು. ಪತನದಿಂದ ಕಳೆದು ಹೋದ ಶ್ರೇಷ್ಠವಾದ ದೈವಿಕ ಜೀವವನ್ನು ಮಾನವ ಕುಲಕ್ಕೆ ದೊರಕಿಸಿಕೊಡುವುದು—ಅಂದರೆ, ಮುಕ್ತಿದಾತನಾಗಿ, ರಕ್ಷಕನಾಗಿ ಮಾನವ ಕುಲದ ಪತನದ ದುಷ್ಫಲವನ್ನು ನೀಗಿ, ಸದಿಚ್ಛೆಯು ಸರ್ವರಲ್ಲಿ ಆಧ್ಯಾತ್ಮಿಕ ಜೀವವಿರುವಂತೆಯೂ ಅದೂ ಸಮೃದ್ಧಿಯಾಗಿರುವಂತೆಯೂ ಮಾಡಿದುದು ಮೊದಲನೆಯುದು.

ತನ್ನ ಮಾತುಗಳಿಂದಲೂ ಕಾರ್ಯಗಳಿಂದಲೂ ಭಗವಂತನ ಮೆಚ್ಚಿಕೆಗೆ ಪಾತ್ರವಾದ ಮಾನವಜೀವನವನ್ನು ನಡೆಸುವ ಉಚ್ಚ ಆದರ್ಶವನ್ನು ಮಾನವ ಜನತೆಗೆ ನೀಡುವುದು ಎರಡನೆಯುದು.

"ನಾನೇ ಆ ದಾರಿ" (ಯೋ XIV, 6)

"ನಾನು ಲೋಕದ ಆ ಪ್ರಕಾಶ" (ಯೋ VIII, 12)

"ನಾನು ನಿಮಗೆ ಮಾಡಿದಂತೆ ನೀವು ಕೂಡ ಮಾಡಬೇಕೆಂದು ನಿಮಗೊಂದು ಆದರ್ಶವನ್ನು ನಾನಿತ್ತಿರುವೆನು" (ಯೋ XIII, 15)

ಕ್ರಿಸ್ತನ ಮತ

ಅತಿ ಸಾಮಾನ್ಯವಾದ ಮನುಷ್ಯನೂ ತಾನು ಗೈದ ಪ್ರತಿ ಕಾರ್ಯವೂ ದೀರ್ಘಕಾಲ ಬಾಳಬೇಕೆಂದು ಬಯಸುತ್ತಾನೆ. ಹಾಗಿರುವಾಗ ಯೇಸು ಕ್ರಿಸ್ತನಂತಹ ಮಹಾತ್ಮನು ತನ್ನ ಕಾರ್ಯವು 'ಜಗದಂತ್ಯದ ವರೆಗೂ' ಉಳಿಯುವಂತೆ ನೋಡಿಕೊಂಡಿರಲೇಬೇಕು.

"ಇದೋ ಎಲ್ಲ ದಿನಗಳಲ್ಲಿಯೂ ಜಗದಂತ್ಯದ ವರೆಗೂ ನಾನು ನಿಮ್ಮೊಡನಿರುವೆನು" (ಮ XXVIII 20) ಎಂದು ಯೇಸುವೇ ತನ್ನ ಶಿಷ್ಯರಿಗೆ ಆಶ್ವಾಸನೆಯೊಂದನ್ನು ಕೊಟ್ಟಿರುವನು.

ಯೇಸುಕ್ರಿಸ್ತನು ತನ್ನ ದಿವ್ಯ ಸಂದೇಶವನ್ನು ಬಹಿರಂಗವಾಗಿ ಬೋಧಿಸುತಿದ್ದನು. ಆದರೂ ವಿಶಿಷ್ಟ ಬೋಧನೆಯುನ್ನೂ ತತ್ವಾರ್ಥ ವಿಚಾರಗಳನ್ನೂ ತನ್ನ ಶಿಷ್ಯರಿಗೆ ಮಾತ್ರ ಮೀಸಲಾಗಿರಿಸಿದ್ದನು. ಆತನ ಪ್ರಮುಖ ಶಿಷ್ಯರು ಹನ್ನೆರಡು ಮಂದಿ ಮಾತ್ರ. ಆ ಶಿಷ್ಯರು ತಾನು ಆರಂಭಿಸಿದ ವಿಶ್ವದ ಪುನರುಜ್ಜೀವನವನ್ನು ಮುಂದುವರಿಸುವಂತೆ.

"ಅಖಿಲ ಜಗತ್ತಿಗೆ ನೀವು ಹೋಗುತ್ತ, ಪ್ರತಿ ಜೀವಿಗೂ ಸಂದೇಶ ವನ್ನು ಬೋಧಿಸಿರಿ" (ಮಾರ್ಕ್ XVI, 15)

"ಮೋಕ್ಷದಲ್ಲಿಯೂ ಲೋಕದಲ್ಲಿಯೂ ಸಮಸ್ತಾಧಿಕಾರವು ನನಗೆ ಕೊಡಲ್ಪಟ್ಟದೆ. ಆದುದರಿಂದ ಹೋಗಿ, ಸಮಸ್ತ ಜನಾಂಗಗಳಿಗೂ ಬೋಧಿಸಿರಿ. ಪಿತನ, ಸುತನ ಮತ್ತು ಪವಿತ್ರಾತ್ಮನ ನಾಮದಲ್ಲಿ ಅವರಿಗೆ ಜ್ಞಾನ ಸ್ನಾನವನ್ನು ನೀಡಿರಿ" (ಮತ್ತೇಯ XXVIII 18, 19) ಎಂದು ಯುಕ್ತ ಅಧಿಕಾರದ ಆಣತಿಯನ್ನಿತ್ತನು.

ಹೀಗೆ ಯೇಸುವು ತನ್ನ ಸಂದೇಶವನ್ನು ಅರ್ಥಾತ್ ಮತವನ್ನು ಜಗತ್ತಿನಲ್ಲಿ ಬಿತ್ತರಿಸಲು ಆಣತಿಯನ್ನೀಯುವಾಗಲೇ ಅವರೊಳಗೆ ಐಕ್ಯತೆ ಯುಳಿಯುವಂತೆ, ಮತಭೇದಗಳು ಬಾರದಂತೆ ತಕ್ಕ ವ್ಯವಸ್ಥೆಯನ್ನೂ ಮಾಡಿರುವನು. ಆ ದ್ವಾದಶ ಶಿಷ್ಯರು ಅವರ ತರುವಾಯ ಅವರ ಸ್ಥಾನಕ್ಕೆ ಬಂದವರು ಏಕನಾಯಕನಡಿಯಲ್ಲಿರುವಂತೆ ಮಾಡಿದನು.

"ನೀನು ಪೇತ್ರನಾಗಿರುವೆ. ಮತ್ತು ಈ ಬಂಡೆಗಲ್ಲಿನ ಮೇಲೆ ನನ್ನ ಶ್ರೀ ಸಭೆಯನ್ನು ನಾನು ರಚಿಸುವೆನು. ನರಕದ ದ್ವಾರಗಳು ಅದರ ಮೇಲೆ ವರ್ತಿಸಲಾರವು. ಮೋಕ್ಷ ರಾಜ್ಯದ ಬೀಗದ ಕೈಗಳನ್ನು ನಿನಗೆ ನಾನೀಯುವೆನು. ನೀನು ಯಾವುವೆಲ್ಲವನ್ನು ಜಗತ್ತಿನಲ್ಲಿ ಬಂಧಿಸುವೆಯೋ ಅವೆಲ್ಲವೂ ಮೋಕ್ಷದಲ್ಲಿಯೂ ಬಂಧಿಸಲ್ಪಡುವುವು. ಮತ್ತು ಯಾವುದೆಲ್ಲ ವನ್ನು ಜಗತ್ತಿನಲ್ಲಿ ನೀನು ಬಿಡಿಸುವೆಯೋ ಅವೆಲ್ಲವೂ ಮೋಕ್ಷದಲ್ಲಿಯೂ ಬಿಡಿಸಲ್ಪಡುವುವು." (ಮತ್ತೇಯ XVI, 18, 19)

ಈ ಮಾತುಗಳು ಯೇಸು ಕ್ರಿಸ್ತನ ಧರ್ಮ ಸಂಸ್ಥೆಯಾದ ಶ್ರೀ ಸಭೆಗೆ ಪೇತ್ರನೆಂಬ ಅನ್ವರ್ಥ ನಾಮವನ್ನು ಕೊಟ್ಟು, ತನ್ನ ಶಿಷ್ಯನೊಬ್ಬನನ್ನು ನಾಯಕನನ್ನಾಗಿ ಮಾಡಿದ ವಿಷಯವನ್ನು ಸ್ಪಷ್ಟಗೊಳಿಸುತ್ತವೆ. ಆ ಪೇತ್ರನ ಮೊದಲ ಹೆಸರು ಸಿಮೋನನೆಂದು. ಪೇತ್ರನೆಂದರೆ ಬಂಡೆಗಲ್ಲು ಎಂದು ಅರ್ಥ. ತಾನು ಸ್ಥಾಪಿಸಿದ ಧರ್ಮ ಸಂಸ್ಥೆಯಾದ ಶ್ರೀ ಸಭೆಗೆ ಭದ್ರವಾದ ಬಂಡೆಗಲ್ಲು ತಳಹದಿಯಾಗಿದೆ. ಹೀಗಾಗಿ ಯಾವ ಬಗೆಯ ಅಪಾರ್ಥಗಳೂ ಮತ ಭೇದಗಳೂ ಬಂದರೂ ಮೂಲ ಸಂಸ್ಥೆಯು ತನ್ನ ಅಚ್ಚಳಿಯದೆ, ಸಂಸ್ಥಾಪಕ ಯೇಸುಕ್ರಿಸ್ತನ ದಿವ್ಯ ಸಂದೇಶವು ವಿಶ್ವದೆಲ್ಲೆಡೆ ಗಳಿಗೂ ವಿಸ್ತರಿಸ ಹತ್ತಿದೆ. ಪೇತ್ರನೇ ಮೊತ್ತಮೊದಲನೆಯ ಜಗದ್ಗುರು.

ಅರ್ಥಾತ್ ಪೋಪ ಸ್ವಾಮಿ. ಪೇತ್ರನ ಸ್ಥಾನವನ್ನು ಪಡೆದವರೆಲ್ಲರೂ ಜಗದ್ಗುರುಗಳು. ಈ ಕ್ರಮವು ಅಂದಿನಿಂದ ಇಂದಿನ ತನಕ ನಡೆದಿದೆ.

ಕ್ರಿಸ್ತನ ಮತವೂ ಬೈಬಲ್ ಗ್ರಂಥವೂ

ಬೈಬಲ್ ಎಂಬುದು ಕ್ರೈಸ್ತರ ಪವಿತ್ರ ಗ್ರಂಥ. ಬೈಬಲ್ ಎಂದರೆ ಗ್ರಂಥವೆಂದರ್ಥ. ಸಮಸ್ತ ಗ್ರಂಥಗಳಲ್ಲಿ ಅದುವೆ ಪ್ರಪ್ರಥಮ ಶ್ರೇಣಿಯ ಗ್ರಂಥವೆಂದು ಈ ಹೆಸರು ತಿಳಿಸುವುದು. ಅದು ಒಂದು ಗ್ರಂಥವೆಂಬಂತೆ ಕರೆಯಲ್ಪಡುವುದಾದರೂ ಅದರಲ್ಲಿ ಎಪ್ಪತ್ತ ಮೂರು ಗ್ರಂಥಗಳಿವೆ. ಇಂತಹ ಮಹಾ ಸಂಕಲನದ ವಿವಿಧ ಭಾಗಗಳು ಒಬ್ಬ ಲೇಖಕನಿಂದಾಗಲಿ, ಒಂದೇ ಕಾಲದಲ್ಲಾಗಲಿ, ರಚಿಸಲ್ಪಟ್ಟವುಗಳೆಂದು ತಿಳಿಯಬಾರದು. ಮೊದಲನೆಯ ಭಾಗವನ್ನು ಬರೆದ ಸುಮಾರು ಹದಿನಾಲ್ಕು ಶತಮಾನಗಳ ಅನಂತರ ಕೊನೆಯ ಭಾಗವು ಬರೆಯಲ್ಪಟ್ಟಿತೆಂದು ತಿಳಿದು ಬಂದಿದೆ. ಇಷ್ಟು ದೊಡ್ಡದಾದ ಆ ಗ್ರಂಥವನ್ನು ಕಾಲ ಹಾಗೂ ವಿಷಯದ ದೃಷ್ಟಿಯಿಂದ ಎರಡು ವಿಭಾಗಗಳಾಗಿ ವಿಂಗಡಿಸಿರುವರು. ಮೊದಲನೆಯದನ್ನು ಹಳೆಯ ಒಡಂಬಡಿಕೆ (Old Testament) ಎಂದೂ ಮತ್ತಿನದನ್ನು ಹೊಸ ಒಡಂಬಡಿಕೆಯೆಂದೂ ಕರೆಯುವರು. ಮೊದಲನೆಯ ಭಾಗದಲ್ಲಿ ಪ್ರಪಂಚ ಸೃಷ್ಟಿಯಿಂದ ಕ್ರಿಸ್ತ ಜನನದ ಪೂರ್ವದ ವರೆಗೆ ಯೆಹೂದ್ಯ ಜನಾಂಗದ ಸ್ಥಿತಿಗತಿಗಳು ವಿವೇಚಿಸಲ್ಪಟ್ಟವೆ. ಹೀಗಾಗಿ ಈ ಭಾಗವು ಯೆಹೂದ್ಯರಿಗೂ ಮಾನ್ಯವಾಗಿದೆ.

ಎರಡನೆಯ ಭಾಗವಾದ ಹೊಸ ಒಡಂಬಡಿಕೆಯಲ್ಲಿ ಕ್ರಿಸ್ತ ಜನನದಿಂದ ಸುಮಾರು ನೂರು ವರ್ಷಗಳ ವರೆಗೆ ನಡೆದ ವಿಷಯಗಳು ವಿವೇಚಿಸಲ್ಪಟ್ಟವೆ. ಮೊದಲನೆಯ ಭಾಗದಲ್ಲಿ ನಾಲ್ವತ್ತಾರೂ ಎರಡನೆಯದರಲ್ಲಿ ಇಪ್ಪತ್ತೇಳೂ ಗ್ರಂಥ ಭಾಗಗಳಿವೆ. ಹೊಸ ಒಡಂಬಡಿಕೆಯಲ್ಲಿ ಯೇಸುಕ್ರಿಸ್ತನ ಜೀವನ ಬೋಧನೆ ಮತ್ತು ಮರಣಗಳ ವಿವರಗಳಿವೆ; ಮಾತ್ರವಲ್ಲ ಆತನು ಬೋಧಿಸಿದ ವಿಷಯಗಳ, ಧಾರ್ಮಿಕ ಸತ್ಯಗಳ ನೈತಿಕ ಸೂತ್ರಗಳ ಅರ್ಥ ವಿವರವನ್ನು ಕೊಟ್ಟು ಆತನ ಶಿಷ್ಯರು ತಮ್ಮ ಶಿಷ್ಯರ—ಅರ್ಥಾತ್ ಕ್ರೈಸ್ತ ಮತಾನುಯಾಯಿಗಳ ಸಂದೇಹಗಳನ್ನು ನಿವಾರಿಸಿದ ಪತ್ರಗಳೂ ಸೇರಿವೆ.

ಹೀಗಿದ್ದರೂ ಬೈಬಲ್ ಅಥವಾ ಅದರ ಉತ್ತರ ಭಾಗವಾದ ಹೊಸ

ಒಡಂಬಡಿಕೆಯಿಂದ ಯೇಸುಕ್ರಿಸ್ತನ ಬೋಧನೆಯನ್ನು ಸಮಗ್ರವಾಗಿ ತಿಳಿಯಲು ಸಾಧ್ಯವಿಲ್ಲ: ಇದಕ್ಕೆ ಕಾರಣಗಳೂ ಇವೆ—

೧. ಯೇಸುಕ್ರಿಸ್ತನು ಕ್ರಿ. ಶ. ೩೩ರಲ್ಲಿ ಮರಣ ಹೊಂದಿದನು. ಮಾತ್ರವಲ್ಲ ಹೊಸ ಒಡಂಬಡಿಕೆಯ ಗ್ರಂಥ ಭಾಗಗಳು ಕಾಲ ಕ್ರಮದಲ್ಲಿ ಬರೆಯಲ್ಪಟ್ಟುವು. ಕೊನೆಯ ಭಾಗವು ಕ್ರಿ. ಶ. ೧೦೦ರ ವರೆಗೆ ಬರೆಯಲ್ಪಡಲಿಲ್ಲ. ಹೀಗಾಗಿ ಬೈಬಲೇ ಕ್ರೈಸ್ತ ಮತದ ಸಮಗ್ರ ಬೋಧನೆಯನ್ನು ನೀಡುವ ಗ್ರಂಥವಾಗಿರುತ್ತಿದ್ದರೆ, ಯೇಸುವಿನ ಮರಣದ ಬಳಿಕ, ಕೊನೆಯ ಭಾಗದ ರಚನೆಯ ವರೆಗೆ ಬಾಳಿದ ಹಾಗೂ ಸತ್ತ ಕ್ರೈಸ್ತರಿಗೆ ಕ್ರೈಸ್ತ ಮತದ ಪರಿಪೂರ್ಣಾನುಭವವು ಸಿಗಲು ಸಾಧ್ಯವಿಲ್ಲ.

೨. ಹೊಸ ಒಡಂಬಡಿಕೆಯು ಯೇಸುಕ್ರಿಸ್ತನಿಂದಾಗಲಿ, ಆತನ ಜೀವನ ಕಾಲದಲ್ಲಾಗಲಿ ಬರೆಯಲ್ಪಡಲಿಲ್ಲ. ಆದರೆ ಆತನ ಶಿಷ್ಯರಿಂದಲೂ ಶಿಷ್ಯರ ಶಿಷ್ಯರಿಂದಲೂ ಬರೆಯಲ್ಪಟ್ಟದೆ. ಪ್ರತಿ ಲೇಖಕರು ತಮ್ಮ ಲೇಖನ ಕಾರ್ಯದ ಉದ್ದೇಶವನ್ನು ತಿಳಿಸಿರುವರು. ಎಲ್ಲ ಲೇಖಕರ ಉದ್ದೇಶವು ಧರ್ಮಪ್ರಚಾರವೇ ಆಗಿದ್ದಿತು. ದೃಷ್ಟಾಂತಕ್ಕಾಗಿ ಲೂಕನೆಂಬವನು ಕ್ರಿಸ್ತ ಮರಣದ ೨೪ ವರ್ಷಗಳ ಅನಂತರ ಬರೆದ ತನ್ನ ಕಥನದಲ್ಲಿ.

"ಆರಂಭದಿಂದಲೇ ಸ್ವಾಮಿಯ ಪ್ರತ್ಯಕ್ಷದರ್ಶಿಗಳೂ ಸೇವಕರೂ ಆದವರು ನಮಗೆ ಉದ್ಧರಿಸಿದ ಪ್ರಕಾರ ನಮ್ಮಲ್ಲಿ ಸಂಭವಿಸಿದ ವಿಷಯಗಳ ಕಥನವನ್ನು ಕ್ರಮೀಕರಿಸುವುದರಲ್ಲಿ ತೊಡಗಿದ್ದುದರಿಂದ ನಿನಗೆ ಉಪದೇಶವಿತ್ತ ಆ ಮಾತುಗಳ ಸತ್ಯತೆಯ ಅರಿವಾಗುವುದಕ್ಕೋಸ್ಕರ, ಎಲೈ ಶ್ರೇಷ್ಠನಾದ ಥಿಯೋಫಿಲಸನೇ, ಆರಂಭದಿಂದಲೇ ಎಲ್ಲ ವಿಷಯಗಳನ್ನು ತತ್ಪರತೆಯಿಂದ ಪಡೆದುದನ್ನು ನಿನಗಾಗಿ ಕ್ರಮವಾಗಿ ಬರೆಯಲು ನನಗೂ ಯೋಗ್ಯವೆನಿಸಿತು" (ಲೂಕ: 1, 1-4)

ಎಂದು ಹೇಳಿರುವನು. ಆದುದರಿಂದ ಕ್ರೈಸ್ತ ಮತಕ್ಕೆ ಹೊಸ ಒಡಂಬಡಿಕೆಯು ಆಧಾರ ಗ್ರಂಥವೇ ಹೊರತು ವಿವಿಧ ತತ್ವಗಳಿಗೆ ಮೂಲವಲ್ಲ.

೩. ಹೊಸ ಒಡಂಬಡಿಕೆಯಲ್ಲಿ ಯೇಸುವಿನ ಸಮಸ್ತ ಬೋಧನೆಯು ಬರೆಯಲ್ಪಟ್ಟಲ್ಲ. ಕೊನೆಯ ಭಾಗವನ್ನು ಬರೆದ ಯೋಹಾನನು ತನ್ನ ಕಥನದ ಕೊನೆಯಲ್ಲಿ

"ಯೇಸುವು ಮಾಡಿದ ಅದೆಷ್ಟೋ ವಿಷಯುಗಳಿವೆಯಾದರೂ, ಅವುಗಳಲ್ಲಿ ಪ್ರತಿಯೊಂದನ್ನೂ ಬರೆಯುವುದಾದರೆ, ಹಾಗೆ ಬರೆದ ಪುಸ್ತಕಗಳನ್ನು ಇಡಲು ಅಖಿಲ ಜಗತ್ತೇ ಸಾಲದೆಂದು ನನ್ನ ಭಾವನೆಯಾಗಿದೆ" (ಯೋಹಾನ XXI, 25)

ಎಂದು ತಿಳಿಸುವನು. ಇದರಿಂದಾಗಿ ಕ್ರಿಸ್ತನ ಬೋಧನೆಯು ಪೂರ್ಣವಾಗಿ ಬರೆಯಲ್ಪಟ್ಟಿಲ್ಲ ಎಂದು ತಿಳಿಯಬೇಕು.

೪. ಯೇಸುವಿನ ಶಿಷ್ಯರು ಬರೆದ ಹಲವು ಲಿಖಿತಗಳು ಕಾಲ ಕ್ರಮದಲ್ಲಿ ಕಣ್ಮರೆಯಾಗಿವೆ. ಅವುಗಳು ಉಪಲಬ್ಧವಾಗಿರುತಿದ್ದರೆ ಇನ್ನೂ ವಿಸ್ತೃತ ವಿಚಾರಗಳನ್ನು ನಾವು ತಿಳಿಯಬಹುದಾಗಿತ್ತು.

೫. ಯೇಸುವಿನ ಬೋಧನೆಗಳೆಲ್ಲವೂ ಬರೆಯಲ್ಪಟ್ಟಿಲ್ಲವಾದರೂ ಆತನ ಬೋಧನೆಯು ಬಹಿರಂಗವಾಗಿತ್ತು. ಶಿಷ್ಯರಿಗೆ ಪ್ರತ್ಯೇಕವಾದ ವಿಚಾರಲಹರಿಯ ಅಮೃತವಾಕ್ಯಗಳನ್ನು ಸವಿಯುವ ಭಾಗ್ಯವು ದೊರಕಿತ್ತು. ಅವೆಲ್ಲವೂ ಲಿಖಿಸಲ್ಪಟ್ಟಿಲ್ಲವಾದರೂ ಜಾನಪದ (Tradition) ಭಾವನೆಗಳಾಗಿ ಹಲವು ಶತಮಾನಗಳ ವರೆಗೆ ಉಳಿದುವು. ಬರೆಹದಲ್ಲಿ ಇಲ್ಲದ ವಿಚಾರಗಳೆಷ್ಟೋ ಜಾನಪದವಾಗಿ ಬದುಕಿ ಬಾಳಿದುವು. ಅವು ಶ್ರುತಿಗೆ ಅನುಬಂಧವಾಗಿ ಧಾರ್ಮಿಕ ಪ್ರಕ್ರಿಯೆಗಳ ಅರ್ಥವನ್ನು ಪೂರ್ಣ ತಿಳಿಯಲು ಉಪಕರಿಸಿದುವು. ಹೀಗೆ ಬರೆಹದಲ್ಲಿರುವ ಹೊಸ ಒಡಂಬಡಿಕೆಯೊಡನೆ ಜಾನಪದದ ಪ್ರಕಾಶವನ್ನು ಜೋಡಿಸಿದಾಗ ಕ್ರೈಸ್ತ ಮತದ ಪೂರ್ಣ ರೂಪವು ಕಾಣುವುದು.

ಶ್ರೀ ಸಭೆ

ಯೇಸುಕ್ರಿಸ್ತನು ತನ್ನ ದಿವ್ಯ ಸಂದೇಶವನ್ನು ವಿಶ್ವದ ಪ್ರತಿಯೊಂದೆಡೆಗೂ ಬೋಧಿಸಲು ಆಣತಿಯನ್ನೀಯುವಾಗ

"ಮೋಕ್ಷದಲ್ಲಿಯೂ ಲೋಕದಲ್ಲಿಯೂ ಸಮಸ್ತಾಧಿಕಾರವು ನನಗೆ ಕೊಡಲ್ಪಟ್ಟಿದೆ. ಆದುದರಿಂದ ಹೋಗಿ, ಸರ್ವ ಜನಾಂಗಗಳಿಗೂ ಬೋಧಿಸಿರಿ; ಪಿತನ, ಸುತನ ಮತ್ತು ಪವಿತ್ರಾತ್ಮನ ನಾಮದಲ್ಲಿ ಅವರಿಗೆ ಜ್ಞಾನಸ್ನಾನವನ್ನು ನೀಡಿರಿ. ನಾನು ನಿಮಗೆ ಆಜ್ಞಾಪಿಸಿದುದೆಲ್ಲವನ್ನೂ ಬಳಸಲು

ಅವರಿಗೆ ಕಲಿಸಿರಿ. ಇದೊ ಎಲ್ಲ ದಿನಗಳಲ್ಲೂ ಜಗದಂತ್ಯದ ವರೆಗೂ ನಾನು ನಿಮ್ಮೊಡನಿರುವೆನು" (ಮತ್ತೇಯ XXVIII, 18-20) ಎಂದೂ

"ವಿಶ್ವಾಸವನ್ನು ಹೊಂದಿ ಯಾರು ಜ್ಞಾನ ಸ್ನಾನವನ್ನು ಪಡೆಯುವನೋ ಅವನು ರಕ್ಷಿಸಲ್ಪಡುವನು, ಮತ್ತು ವಿಶ್ವಾಸಪಡೆಯದವನು ಶಿಕ್ಷಿಸಲ್ಪಡುವನು" (ಮಾರ್ಕ್ 16, 16) ಎಂದೂ ಹೇಳಿರುವನು. ಈ ಮಾತುಗಳಿಂದ ವಿಶ್ವಾಸ ಮತ್ತು ಜ್ಞಾನ ಸ್ನಾನಗಳೆಂಬ ಎರಡು ಮುಖ್ಯ ವಿಷಯುಗಳು ಮಾನವನ ರಕ್ಷಣೆಗೆ ಅಗತ್ಯವೆಂದು ತೋರಿಸಿಕೊಟ್ಟಿರುವನು.

ಕ್ರಿಸ್ತನು ಬೋಧಿಸಿದ ಸಮಸ್ತ ತತ್ವಗಳು ಬೈಬಲಿನಲ್ಲಿಲ್ಲವೆಂದು ನಾವು ಈ ಮೊದಲೇ ಹೇಳಿರುವೆವು. ಹೀಗಾಗಿ ಅದನ್ನು ಮಾತ್ರ ನೋಡಿಕೊಂಡು ಮತವನ್ನು ಅನುಸರಿಸಲು ಸಾಧ್ಯವೂ ಇಲ್ಲ. ಇದನ್ನೇ ಸ್ಪಷ್ಟಮಾಡಲು ದೃಷ್ಟಾಂತವೊಂದು ಹಿತ:

ಭಾರತವು ಘಟನಾತ್ಮಕ ರಾಷ್ಟ್ರವೊಂದಾಗಿದೆ. ನಮ್ಮ ರಾಜ್ಯಾಂಗ ಘಟನೆಯಷ್ಟು ವಿಸ್ತಾರವಾದುದು, ಹಿರಿದಾದುದು ಜಗತ್ತಿನಲ್ಲಿ ಬೇರೆ ಯಾವ ರಾಷ್ಟ್ರದಲ್ಲಿಯೂ ಕಾಣೆವು. ನಮ್ಮ ಘಟನೆಯನ್ನು ಅದೆಷ್ಟೋ ವಿವೇಚನೆಯಿಂದ ರಚಿಸಿರುವರಾದರೂ ಕೇವಲ ಅದನ್ನು ಮಾತ್ರ ನೋಡಿಕೊಂಡು ಒಬ್ಬನು ತನ್ನ ಜೀವನವನ್ನು ಸರಿಯಾಗಿ ನಡೆಸಲು ಸಾಧ್ಯವಿಲ್ಲ. ಪ್ರತಿಯೊಂದು ಸೂತ್ರದ ಅರ್ಥವು ವ್ಯಕ್ತಿ-ವ್ಯಕ್ತಿಗೆ ಏಕ ರೀತಿಯಲ್ಲಾಗದಿರಲೂ ಬಹುದು; ಆಗ ಏಕಾರ್ಥದಿಂದ ಐಕ್ಯತೆಯೊಂದುಳಿಯುವಂತೆ ಪ್ರತಿಯೊಂದು ಸೂತ್ರದ ಅರ್ಥವನ್ನು ಕೂಲಂಕುಷವಾಗಿ ವಿವರಿಸುವ ನ್ಯಾಯಾಂಗವೊಂದಿದೆ. ಈ ನ್ಯಾಯಾಂಗದ ಕೂಟವು ಸೂತ್ರದ ಅರ್ಥವನ್ನು ಮೂಲ ಘಟನೆಯ ಉದ್ದೇಶಕ್ಕೆ ಅನುಸಾರವಾಗಿ, ಸಂದರ್ಭಗಳನ್ನು ನೋಡಿಕೊಂಡು ವಿವರಿಸುವುದು.

ಇದೇ ರೀತಿಯನ್ನು ಕ್ರೈಸ್ತ ಮತಕ್ಕೂ ಅನ್ವಯಿಸಬಹುದು. ಬೈಬಲ್ ದೈವಿಕ ಪ್ರೇರಣೆಯಿಂದ ಬರೆಯಲ್ಪಟ್ಟಿತೆಂಬುದಾದರೂ ಅದರಲ್ಲಿ ಮತಾನುಸರಣೆಗೆ ಯುಕ್ತ ಸಲಹೆಗಳೂ ಆಧಾರಗಳೂ ದೊರೆಯುತ್ತವಾದರೂ ಅದರಲ್ಲಿ ಕೊಟ್ಟಿರುವ ಹಲವು ಸೂತ್ರಗಳ ಅರ್ಥವು ವ್ಯಕ್ತಿಗತ ಭೇದ ಭಾವಗಳಿಗನುಸಾರವಾಗಿ ವಿವಿಧ ರೀತಿಯದಾಗಬಹುದು. ಅದಕ್ಕಾಗಿ ಪ್ರತಿಯೊಂದು ವಿಷಯವನ್ನು ಮೂಲಕ್ಕೆ ವಿರೋಧವಾಗದಂತೆ, ಅರ್ಥ

ವಿವರಣೆಯನ್ನೀಯುವ ಸಭೆಯೇ ಶ್ರೀ ಸಭೆಯು. ಈ ಶ್ರೀ ಸಭೆಯು ಕ್ರಿಸ್ತನ ದಿವ್ಯತತ್ವಗಳ ರಕ್ಷಕವಾಗಿದ್ದು, ಯಾವುದು ಬೈಬಲಿನಲ್ಲಿ ಸೂಕ್ಷ್ಮ ವಾಗಿ ಹೇಳಲ್ಪಾಗಿದೆಯೋ ಅದನ್ನು ಜಾನಪದ ರೀತಿಗನುಗುಣವಾಗಿ ಮೂಲಕ್ಕೆ ವಿರೋಧವಾಗದಂತೆ, ಏನನ್ನೂ ತ್ಯಜಿಸದೆ, ಅಥವಾ ಸೇರಿಸದೆ ಅರ್ಥ ವಿವರಣೆಯನ್ನು ಮಾಡುವುದು. ಆದುದರಿಂದ ಶ್ರೀ ಸಭೆಯೇ, ಕ್ರಿಸ್ತ ಮತದ ತತ್ವಗಳ ಅರ್ಥ ವಿವರಣೆಯನ್ನು ಮಾಡಬಲ್ಲ ಏಕ ಮಾತ್ರ ಸಂಸ್ಥೆಯೇ ನ್ಯಾಯವಾದ ಅರ್ಥ ವಿವರಣೆಯನ್ನೊದಗಿಸುವುದು.

ಈ ಶ್ರೀ ಸಭೆಯ ಸದಸ್ಯರಾರೆಂಬ ಪ್ರಶ್ನೆಯುದಿಸುತ್ತದೆ: ಕ್ರಿಸ್ತನ ಮಾತುಗಳಲ್ಲಿ ವಿಶ್ವಾಸ (Faith)ವನ್ನು ಹೊಂದಿ ಜ್ಞಾನ ಸ್ನಾನವನ್ನು ಪಡೆದು ಪವಿತ್ರೀಕರಣಕ್ಕಾಗಿ ಸ್ಥಾಪಿಸಿದ **ದೇವದ್ರವ್ಯ** (Sacraments) ಗಳನ್ನು ಬಳಸುತ್ತ ರೋಮಿನ ಜಗದ್ಗುರುವನ್ನು ಕ್ರಿಸ್ತನ ಪ್ರತಿನಿಧಿಯಾಗಿ ಸ್ವೀಕರಿಸುವ ಸಮಸ್ತ ಜನತೆಯೇ ಈ ಶ್ರೀ ಸಭೆಯ ಸದಸ್ಯರು.

ಪೇತ್ರನೇ ಪ್ರಥಮ ಜಗದ್ಗುರು

ಪುನರುತ್ಥಾನಗೊಂಡ ಯೇಸುಕ್ರಿಸ್ತನು ಅದೊಂದು ಸಂದರ್ಭದಲ್ಲಿ ತನ್ನ ಶಿಷ್ಯ ಸಮೂಹದೊಡನಿದ್ದು ಭೋಜನವನ್ನು ತೀರಿಸಿದನು. ಬಳಿಕ ಪೇತ್ರನೆಂಬ ಅನ್ವರ್ಥನಾಮದಿಂದ ಕರೆಯಲ್ಪಟ್ಟ ಸಿಮೋನನನ್ನು ಕುರಿತು ಯೇಸುವು "ಯೋಹಾನನ ಪುತ್ರನಾದ ಸಿಮೋನನೇ, ಇವರೆಲ್ಲರಿಗಿಂತಲೂ ಮಿಗಿಲಾಗಿ ನನ್ನನ್ನು ಪ್ರೀತಿಸುವೆಯಾ?" ಎಂದು ಕೇಳಿದನು. ಆಗ ಆತನು, "ಸ್ವಾಮಿಾ, ನಾನು ನಿಮ್ಮನ್ನು ಪ್ರೀತಿಸುವೆನೆಂದು ನೀವೇ ಬಲ್ಲಿರಿ" ಎಂದು ಉತ್ತರವಿತ್ತನು. ಆಗ ಕ್ರಿಸ್ತನು, "ನನ್ನ ಕುರಿಮರಿಗಳನ್ನು ಮೇಯಿಸು" ಎಂದನು. ಪುನಃ ಯೇಸುವು ತನ್ನ ಮೊದಲಿನ ಪ್ರಶ್ನೆಯನ್ನೇ ಪೇತ್ರನಿಗೆ ಹಾಕಿದನು. ಮೊದಲಿನಂತೆಯೇ ಉತ್ತರ-ಪ್ರತ್ಯುತ್ತರಗಳಾದುವು. ಮೂರನೆಯ ಸಲವೂ ಯೇಸುವು ಕೇಳಲು ಸಿಮೋನ ಪೇತ್ರನಿಗೆ ದುಃಖ ವಾಯಿತು. ಆತನು, "ಸ್ವಾಮಿಾ, ನೀವು ಸರ್ವವನ್ನೂ ಬಲ್ಲವರು. ನಾನು ನಿಮ್ಮನ್ನು ಪ್ರೀತಿಸುವೆನೆಂದೂ ನೀವು ಬಲ್ಲಿರಿ" ಎಂದನು. ಅದಕ್ಕುತ್ತರ ವಾಗಿ ಯೇಸುವು "ನನ್ನ ಕುರಿಗಳನ್ನು ಮೇಯಿಸು" ಎಂದನು.

ಭಗವಂತನು ಒಡೆಯನೆಂದೂ ತಾನು ಕುರಿಗಳ ಪಾಲಕನೆಂದೂ

ಜನತೆಯು ಕುರಿಮಂದೆಯೆಂದೂ ಯೇಸುಕ್ರಿಸ್ತನು ಅನೇಕ ಸಂದರ್ಭಗಳಲ್ಲಿ ತಿಳಿಸಿದ್ದನು. ಇಲ್ಲಿ "ಹೇಳಿದ ಕುರಿಮರಿಗಳನ್ನು ಮೇಯಿಸು" "ಕುರಿಗಳನ್ನು ಮೇಯಿಸು" ಎಂಬ ನುಡಿಗಳಿಂದ ಪೇತ್ರನಿಗೆ ಸಾಮಾನ್ಯ ಜನತೆಯನ್ನು ಮಾತ್ರವಲ್ಲ ಆ ಜನತೆಯ ಹಿರಿಯರನ್ನೂ ಪಾಲಿಸುವ ಅಧಿಕಾರವನ್ನು ಕೊಟ್ಟನು. ಪೇತ್ರನು ಸಮಸ್ತ ಶಿಷ್ಯರಲ್ಲಿ ಪ್ರಪ್ರಥಮನಾದನು; ಮಹಾ ನಾಯಕನಾದನು. ಅವರೆಲ್ಲರಿಗೂ ಅವನೇ ಪೋಪನಾದನು. (ಪೋಪ ಎಂದರೆ ತಂದೆ); ಪ್ರಥಮ ಜಗದ್ಗುರುವಾದನು.

ಪ್ರಥಮ ಜಗದ್ಗುರು ಪೇತ್ರನು ಮೊದಲು ಬೇರೆ ಬೇರೆ ಊರುಗಳಲ್ಲಿ ಬೋಧಿಸಿ, ಕೊನೆಗೆ ರೋಮಿನಲ್ಲಿ ಕಾರ್ಯಾಸಕ್ತನಾಗಿದ್ದನು. ಆಗ ರೋಮ್ ನಗರವು ರೋಮಕ ಮಹಾ ಸಾಮ್ರಾಜ್ಯದ ಕೇಂದ್ರವಾಗಿದ್ದು ಜಗತ್ತಿನಲ್ಲಿಯೇ ಪ್ರಸಿದ್ಧವಾಗಿತ್ತು. ರಾಜಕೀಯ ಕೇಂದ್ರದಲ್ಲಿ ಧಾರ್ಮಿಕ ನಾಯಕನು ನೆಲೆ ನಿಂತು ಇತರ ಪ್ರಚಾರಕರಿಗೆ ಆಧಾರವಾದನು; ಕೇಂದ್ರವಾದನು. ಪೇತ್ರನು ಕ್ರಿ. ಶಕ. ೬೭ರಲ್ಲಿ ವಧೆ ಮಾಡಲ್ಪಟ್ಟನು. ಅವನ ತರುವಾಯ ಆ ಸ್ಥಾನಕ್ಕೆ ಬಂದವರನ್ನು ನಾಯಕರಾಗಿ ಸ್ವೀಕರಿಸುವ ಕ್ರಮವು ಬಂದಿದೆ. ರೋಮಿನ ಬಿಷಪರನ್ನು ಜಗದ್ಗುರುವೆನ್ನುವುದೂ ಜಗದ್ಗುರುವಾಗಿ ಆರಿಸಲ್ಪಟ್ಟವರು ರೋಮಿನ ಬಿಷಪರಾಗಿ ಅಧಿಕಾರ ವಹಿಸುವುದೂ ಆದಿಯಿಂದಲೇ ರೂಢಿಗೆ ಬಂದಿದೆ.

೨೬೨ ಮಂದಿಗಳು

ಪೇತ್ರನೆಂಬವನು ಮೊತ್ತಮೊದಲನೆಯ ಜಗದ್ಗುರುವಾಗಿ ಭಗವಾನ್ ಯೇಸುಕ್ರಿಸ್ತನಿಂದ ನಿಯಾಮಿಸಲ್ಪಟ್ಟನು. ಈ ಗುರು ಪರಂಪರೆಯು ಅವಿರತವಾಗಿ ನಡೆದು ಬಂದು ಇಂದು ೧೨ನೆಯ ಪಿಯೂಸರು ಆ ಸ್ಥಾನದಲ್ಲಿರುವರು. ಇವರು ಗುರು ಪರಂಪರೆಯಲ್ಲಿ ೨೬೨ನೆಯವರು.

ಜಗದ್ಗುರುಗಳ ಅಧಿಕಾರವನ್ನು ಹಲವು ದೇಶಗಳವರು ವಹಿಸಿರುವರು. ಅವರ ಅವಧಿಗಳಲ್ಲೂ ಏಕ ರೂಪತೆಯು ಇರುವುದಿಲ್ಲ. ೧೮೪೬ರಿಂದ ೧೮೭೮ರ ವರೆಗೆ ಅಧಿಕಾರ ವಹಿಸಿದ ೯ನೆಯ ಪಿಯೂಸರು ೩೧ ವರ್ಷಗಳಷ್ಟು ದೀರ್ಘಕಾಲದ ವರೆಗೆ ಜಗದ್ಗುರುಗಳಾಗಿದ್ದರೆ, ೨ನೆಯ ತಿಯೊದೊರ್ ಎಂಬವರು ಕ್ರಿ. ಶ. ೮೯೭ರಲ್ಲಿ ಕೇವಲ ೨೦ ದಿನಗಳ ವರೆಗೆ ಜಗ

ದ್ಗುರುಗಳಾಗಿದ್ದರು. ಇಂದಿನ ಜಗದ್ಗುರುಗಳಾದ ೧೨ನೆಯ ಪಿಯೂಸ ಪೋಪ ಸ್ವಾಮಿಗಳು ೧೯೩೯ನೆಯ ಮಾರ್ಚಿ ೨ರಂದು ಆರಿಸಲ್ಪಟ್ಟರು.

ಕ್ರಿಸ್ತ ಮತಗಳಿಲ್ಲ

ಯೇಸುಕ್ರಿಸ್ತನು ಸತ್ಯದ ಸ್ಥಿರತೆಗಾಗಿ ಇಹಲೋಕಕ್ಕೆ ಬಂದವನೆಂದು ಆತನೇ ಹೇಳಿರುವನು. ಆತನು ತ್ರಿಕಾಲಾಬಾಧಿತವೂ ಸಕಲಚರಾಚರ ವಸ್ತು ವಿಷಯುಗಳಿಗೂ ಮೂಲವೂ ಆದ ಆ ಪರಾಸ್ಪರ ವ್ಯಕ್ತಿಯಾದ ಭಗವಂತನ ಸರಿಯಾದ ಪರಿಚಯುವನ್ನು ಮಾನವ ಜನತೆಗೆ ಬಿತ್ತರಿಸಿದನು. ತಾನೇ ಸತ್ಯವೆಂದು ಸಾರಿದ ಆತನ ಮಾತುಗಳಿಗೆ ಎರಡು ಭಿನ್ನಾರ್ಥಗಳಿರಲಾರವು. ಹೀಗಾಗಿ ಕ್ರಿಸ್ತ ಮತವೊಂದೇ ಇರುವುದು.

"....ಅಲ್ಲಿ ಒಂದು ಮಂದೆಯೂ (Fold) ಒಬ್ಬ **ಪಾಲಕ** (Shepherd)**ನೂ** ಇರುವರು" (ಯೋಹಾನ X: 16)

"ನೀನು ಪೇತ್ರನಾಗಿರುವೆ; ಈ ಬಂಡೆಯ ಮೇಲೆ ನನ್ನ ಶ್ರೀ ಸಭೆಯನ್ನು ಕಟ್ಟುವೆನು" (ಮತ್ತೇಯು XVI, 18)

"ಸತ್ಯ ಸಮರ್ಥನೆಗಾಗಿ ಈ ಲೋಕಕ್ಕೆ ನಾನು ಬಂದೆನು. ಸತ್ಯದ ಪ್ರತಿಯೊಬ್ಬನೂ ನನ್ನ ಸ್ವರವನ್ನು ಆಲಿಸುತ್ತಾನೆ" (ಯೋಹಾನ XVII, 37)

"ನೀವು ಸತ್ಯವನ್ನು ತಿಳಿದರೆ, ಅದೇ ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು (ಯೋಹಾನ VIII, 32)

ಈ ಮೊದಲಾದ ಮಾತುಗಳು ಯೇಸುಕ್ರಿಸ್ತನ ಮತವೊಂದು ಮಾತ್ರವೆಂದು ಸಾರುವವು.

ವಸ್ತು ಸ್ಥಿತಿ ಹೀಗಿರುವಾಗ ಜಗತ್ತಿನ ಸಕಲ ಕ್ರೈಸ್ತರಲ್ಲಿ ಏಕರೂಪತೆಯು ಇರಬೇಕಾಗಿತ್ತು. ಆದರೆ ಅನೇಕ ಪಕ್ಷಗಳು ತಲೆಯೆತ್ತಿವೆ. ಎಲ್ಲರೂ ಕ್ರೈಸ್ತರೆಂದೂ ಯೇಸುಕ್ರಿಸ್ತನ ಅನುಯಾಯಿಗಳೆಂದೂ ಹೇಳಿಕೊಳ್ಳುತ್ತಾರೆ. ಎಲ್ಲರಿಗೂ ಬೈಬಲೇ ಪವಿತ್ರ ಗ್ರಂಥವಾದರೂ ಎಲ್ಲರಿಗೂ ಅದರ ಸಕಲ ಗ್ರಂಥ ಭಾಗಗಳು ಮಾನ್ಯವಾಗಿಲ್ಲ. ತಮ್ಮ ಪಕ್ಷದ ರೀತಿಗನುಗುಣವಾದ ಭಾಗಗಳನ್ನು ಮಾತ್ರ ಸ್ವೀಕರಿಸುವರಲ್ಲದೆ, ಪೂರ್ಣ ಗ್ರಂಥವನ್ನಲ್ಲ.

ಜಗತ್ತಿನ ಎಲ್ಲ ಕ್ರೈಸ್ತರನ್ನು (ರೋಮನ್) ಕಥೋಲಿಕ (Roman

Catholics)ರೆಂದೂ ಪ್ರೊಟೆಸ್ಟಾಂಟ (Protestants)ರೆಂದೂ ಎರಡು ವಿಧಗಳಾಗಿ ವಿಂಗಡಿಸಬಹುದು. ಭಗವಾನ್ ಯೇಸುಕ್ರಿಸ್ತನ ಆದೇಶದಂತೆ ಆತನ ಪ್ರತಿನಿಧಿಯೆನಿಸಿ; ಸಮಸ್ತ ಕ್ರೈಸ್ತರ ಜಗದ್ಗುರುವು ರೋಮಿನಲ್ಲಿರುವುದರಿಂದ ಅವರ ಆದೇಶದಂತೆ ನಡೆಯುವ ಕ್ರೈಸ್ತರು ರೋಮನ್ ಕಥೋಲಿಕರು. ಪ್ರೊಟೆಸ್ಟ್ ಎಂದರೆ ವಿರೋಧಿಸು ಎಂದರ್ಥ. ಆ ಜಗದ್ಗುರುವಿನ ಅಧಿಕಾರವನ್ನು ವಿರೋಧಿಸಿ ಪಕ್ಷ ಕಟ್ಟಿಕೊಂಡವರು ಪ್ರೊಟೆಸ್ಟಾಂಟರು. ಅವರು ಯಾವಾಗ ಏಕೆ ವಿರೋಧಿಸಿದರೆಂಬುದನ್ನು ಇತಿಹಾಸದ ಆಧಾರದಿಂದ ನಾವು ತಿಳಿಯಬಹುದು. ಮೂಲವನ್ನು ತೊರೆದು ಹೊಸ ಪಕ್ಷವನ್ನು ಅವರು ಕಟ್ಟಿಕೊಂಡರು. ಕೆಳಗಿನ ಪಟ್ಟಿಯು ಕೆಲವಂಶಗಳನ್ನು ತಿಳಿಸುವುದು.

ಕಥೋಲಿಕರೂ ಪಕ್ಷಗಳೂ

ಹೆಸರು	ಮೂಲಸ್ಥಾನ	ಸ್ಥಾಪಕ	ವರ್ಷ
ಕಥೋಲಿಕ ಶ್ರೀಸಭೆ	ಯೆರೊಸಲೇಂ	ಯೇಸುಕ್ರಿಸ್ತ	33
ಅನಾಬಾಪ್ಟಿಸ್ಟರು	ಜರ್ಮನಿ	ನಿಕೊಲಸ್ ಸ್ಟೊರ್ಕ್	1521
ಲೂಥರನ್	ಜರ್ಮನಿ	ಮಾರ್ಟಿನ್ ಲೂಥರ್	1524
ಪ್ರೆಸ್ಬಿಟೇರಿಯನ್	ಸ್ಕೊಟ್‌ಲೆಂಡ್	ನ್ಯಾಯವಿಧಾನ ಸಭೆ	1560
ಬೆಪ್ಟಿಸ್ಟರು	ಅಮೇರಿಕ	ರೋಜರ್ ವಿಲಿಯಂ	1639
ಕ್ವೇಕರ್ಸ್	ಇಂಗ್ಲೆಂಡು	ಜೋರ್ಜ್ ಫೊಕ್ಸ್	1647
ಮೆಥೊಡಿಸ್ಟ್ ಎಪಿಸ್ಕೊಪಲ್	ಇಂಗ್ಲೆಂಡು	ಜೊನ್ ವೆಸ್ಲಿ	1739

ನೀವು ತಿಳಿದಿರುವಿರಾ

೧. ಕಥೋಲಿಕರು ಜಗದ್ಗುರು ಪೋಪ ಸ್ವಾಮಿಗಳನ್ನು ದೇವರೆಂದು ತಿಳಿದುಕೊಳ್ಳುವುದಿಲ್ಲ. ಅವರು ಕೇವಲ ಆಧ್ಯಾತ್ಮಿಕ ಗುರುಗಳಾಗಿ ಪ್ರತಿ

ಕಥೋಲಿಕನನ್ನು ಸಂಬಂಧಿಸಿಕೊಂಡಿರುವರು. ಅವರು ಯಾವ ದೇಶದ ರಾಜಕೀಯದಲ್ಲಿಯೂ ಹಸ್ತಕ್ಷೇಪ ಮಾಡುವುದಿಲ್ಲ; ಯಾವ ರಾಷ್ಟ್ರದವ ನಿಂದಲೂ ರಾಜಕೀಯ ಗೌರವವನ್ನು ಬಯಸುವುದಿಲ್ಲ.

೨. ಜಗದ್ಗುರು ಪೋಪ ಸ್ವಾಮಿಗಳನ್ನು ಕೇವಲ ಆಧ್ಯಾತ್ಮಿಕ ಧರ್ಮಾಧಿಕಾರಿಯೆಂದೂ ಅಂತರ್ದೇಶೀಯ ರಾಜಕೀಯದಲ್ಲಿ ಅವರ ಸ್ಥಾನವು ಅತ್ಯಲ್ಪವೆಂದೂ ಭಾವಿಸಲು ಸಾಧ್ಯವಿಲ್ಲ. ಅವರಿಗೂ ಸ್ವತಂತ್ರ ವಾದ ಸಣ್ಣ ರಾಜ್ಯವೆಂಬುದಿದೆ. ಅವರ ಸ್ವಂತ ನಾಣ್ಯ ಪದ್ಧತಿ, ಅಂಚೆ ವ್ಯವಸ್ಥೆ, ಇತರ ರಾಷ್ಟ್ರಗಳಲ್ಲಿ ರಾಜದೂತರ ನೇಮಕ ಮೊದಲಾದುವು ಗಳಿಂದ ಅವರೂ ಒಬ್ಬ ಪ್ರಭುವಾಗಿರುವರು. ಅವರಿಗೂ ಪಟ್ಟಾಭಿಷೇಕದ ಕಿರೀಟ ಧಾರಣೆಗಳಿವೆ.

೩. ಯಾವ ದೇಶದ ನಾಗರಿಕನೂ ತನ್ನ ದೇಶದ ನಾಗರಿಕತ್ವ ವನ್ನು ಕಳೆದುಕೊಳ್ಳದೆ ಕಥೋಲಿಕನಾಗಿರಲು ಸಾಧ್ಯವಿದೆ. ಕಥೋಲಿ ಕರು ಆಯಾ ದೇಶದ ನಿವಾಸಿಗಳಾಗಿರುವುದರಿಂದ ಆ ದೇಶದ ಸಂಸ್ಕೃತಿ ಗನುಸಾರವಾಗಿ ಜೀವಿಸಬಹುದು. ಉಡುಗೆ ತೊಡುಗೆಗಳಿಂದ ಒಬ್ಬನ ಸ್ಥಾನಮಾನಗಳು ವ್ಯತ್ಯಾಸ ಹೊಂದುವುದಿಲ್ಲ. ಹೀಗಾಗಿ ಕ್ರೈಸ್ತರು ತಿಲಕ ವನ್ನು ಹಾಕಿಕೊಳ್ಳಬಹುದು, ಜುಟ್ಟು ಕಟ್ಟಿಕೊಳ್ಳಬಹುದು.

೪. ಎಲ್ಲ ಕಥೋಲಿಕರು ಮಾತ್ರ ಸದ್ಗುಣಿಗಳೆಂದೂ ಉಳಿದವ ರೆಲ್ಲರೂ ದುರ್ಗುಣಿಗಳೆಂದೂ ಕಥೋಲಿಕರು ತಿಳಿದುಕೊಳ್ಳುವುದಿಲ್ಲ. ಅಂತೆಯೇ ಎಲ್ಲ ಮತಗಳೂ ಸತ್ಯವೆಂದೂ ಒಪ್ಪಿಕೊಳ್ಳುವುದಿಲ್ಲ. ಸತ್ಯ ವೆಂಬುದು ಒಂದು ಮಾತ್ರ. ಆದುದರಿಂದ ಎಲ್ಲ ಮತಗಳೂ ಸತ್ಯವಾಗಿರ ಲಾರವು.

೫. ಬೈಬಲಿನ ಮೂಲವು ಯಾವ ಭಾಷೆಯಲ್ಲಿದ್ದರೂ ಅನು ವಾದವು ಸಮಗ್ರವಾಗಿದ್ದರೆ ಅದರ ವಾಚನವೂ ಮೂಲದಷ್ಟೇ ಹಿತವಾಗಿರು ವುದು. ಬೈಬಲ್ ದೈವಿಕ ಪ್ರೇರಣೆಯಿಂದ ಬರೆಯಲ್ಪಟ್ಟಿತೆಂದು ಕಥೋಲಿ ಕರ ವಿಶ್ವಾಸವಿದೆಯಾದರೂ ಅದನ್ನು ಬರೆದವರು ಮಾನುಷಿಕ ವ್ಯಕ್ತಿ ಗಳೆಂದೂ ಅವರು ಒಪ್ಪುತ್ತಾರೆ.

ಅನುಬಂಧ

(ಆಧಾರದಿಂದ)

ಪಯಣಕ್ಕಾಗಿ ಪ್ರವೇಶಪತ್ರ (Ticket)

ಪ್ರಥಮ ವರ್ಗ: ಸ್ವಾಯತ್ತ ಬ್ರಹ್ಮಚರ್ಯ, ನಿರಂತರ ದಾರಿದ್ರ್ಯ, ಪರಿಪೂರ್ಣ ವಿಧೇಯತೆಗಳ ಮೂರು ವ್ರತಗಳು

ಮಧ್ಯಮ ವರ್ಗ: ನಿತ್ಯ ಜೀವನದಲ್ಲಿ ಪರಿಶುದ್ಧತೆ, ಲಘುಪಾತಕಗಳನ್ನಾದರೂ ಮಾಡದಿರುವುದು

ಸಾಮಾನ್ಯ ವರ್ಗ: ಮಹಾಪಾತಕಗಳನ್ನು ಮಾಡದಿರುವುದು.

ಸೂಚನೆಗಳು

೧. ಬಂಡಿಗಳು ಎಲ್ಲ ಸಮಯದಲ್ಲಿಯೂ ಹೊರಡುತ್ತವೆ.

೨. ಪ್ರತಿ ವ್ಯಕ್ತಿಗೆ ತನಗೆ ಬೇಕಾದ ಬಂಡಿಯನ್ನಾರಿಸುವ ಹಕ್ಕನ್ನು ನೀಡಲಾಗಿದೆ.

೩. ಎಲ್ಲ ಬಂಡಿಗಳೂ ಭಗವಂತನು ನಿಶ್ಚಯಿಸಿದ ಕಾಲದಲ್ಲಿ ಕೊನೆಮುಟ್ಟುವುವು.

೪. ಸ್ವೇಚ್ಛಾ ಪ್ರಯಾಣದ ಅಥವಾ ಹಿಂತಿರುಗುವ ಪ್ರಯಾಣದ ಟಿಕೇಟುಗಳ ಪರಿಪಾಠವಿಲ್ಲ.

೫. ಪ್ರಯಾಣಿಕರು ಯಾವ ಸ್ಥಳದಲ್ಲಿಯೂ ಬಂಡಿಯನ್ನೇರಬಹುದು.

೬. ಪ್ರಯಾಣಿಕರು ಸತ್ಕಾರ್ಯಗಳನ್ನು ಮಾತ್ರ ತಮ್ಮ ಸಾಮಾನು (Luggage)ಗಳನ್ನಾಗಿ ತರಬೇಕೆಂದು ತಿಳಿಸಲಾಗಿದೆ. ಇತರ ವಿಷಯಗಳನ್ನು ತಂದ ಪ್ರಯಾಣಿಕರಿಗೆ ಬಂಡಿಯಲ್ಲಿ ಸ್ಥಳವು ನಿರಾಕರಿಸಲ್ಪಡುವುದು; ಅಥವಾ ಕೊನೆಮುಟ್ಟುವ ಹಿಂದಿನ ಸ್ಥಾನದಲ್ಲಿ ತಡೆಯಬೇಕಾಗುವುದು.

೭. ಪವಿತ್ರಮಾತೆ ಶ್ರೀಸಭೆಯ ತೊಡೆಯ ಮೇಲೆ ಬರುವ ಎಳೆಯ ಮಕ್ಕಳಿಗೆ ಸರ್ವ ಶರ್ತಗಳಿಂದಲೂ ವಿನಾಯತಿಯಿರುವುದು.

೮. ಇತರ ವಿಚಾರಗಳನ್ನು ತಿಳಿಯಬಹುದು.